## GENERAL INSTRUCTIONS TO THE APPLICANTS

1. Applicants shall read all the instructions carefully before submitting the applications, so as to avoid the mistakes.

2. The applicants shall provide the Mobile number and valid E-mail ID (compulsory), for communication at relevant columns while submitting online application. The authority is not responsible for non receipt of SMS or E-mail.

3. To avoid last minute rush, the applicants are advised to submit the online applications well in advance. The website will accept the applications round the clock **upto 13th June 2019 till 11.59 p.m.**

4. The decision of the High Court of Karnataka will be final, as to the eligibility for Driving Skill Test & Viva-Voce or otherwise of an applicant.

5. The list of eligible applicants short listed for Driving Skill test / Viva Voce will be published in the High Court of Karnataka website – ***www.karnatakajudiciary.kar.nic.in.***

6. Intimation will be sent to the eligible candidates through SMS message to Cell phone and also an email will be sent to Email-ID, The list of short listed applicants will also be notified on the High Court of Karnataka website: *www.karnatakajudiciary.kar.nic.in/recruitment.asp* for downloading the "Call- Letter". Applicant must bring his/her 'Call-Letter', at the time of appearing for the Driving Skill Test / Viva-Voce.

7. The Applicants shall have to appear for the Driving Skill Test and Viva-Voce, if called for, at their own expenses at the place and time decided and notified by the High Court of Karnataka.

8. The Applicants shall produce the copy of "Call Letter", Driving Licence alongwith Voter ID or Aadhaar Card or PAN Card or Ration card or Passport in Original as a proof of identity while appearing for the Driving Skill Test / Viva - Voce for verification.

9. The applicants shall produce all the original testimonials with a set of self attested photo copies i.e., Certificates of SSLC/equivalent examination, Driving License, Caste Certificates, Certificates for claiming reservations, if any, 2 Passport size photographs and also three Character Certificates (one from last studied education institution and two from the respectable persons) while appearing for the Driving Skill Test & Viva-Voce for verification purpose.

10. On the basis of marks obtained in Driving Skill Test, candidates will be short listed for Viva- Voce.

11. Mere success in the Driving Skill Test and/or Viva-Voce shall not confer any right to appointment and no applicant shall be appointed to the post unless the High Court of Karnataka is satisfied, after such

enquiries as may be considered necessary that the applicant is suitable in all respects for appointment to the post.

12. The applicant shall pay the appropriate Application Fee as mentioned in the notification, either by mode of online banking or through Challan form as notified by the High Court of Karnataka. The fee shall be remitted at any branch of the State Bank of India (SBI).

13. The Applicant shall scan his/her latest passport size photograph with white back ground (having 5 cms of length X 3.6 cms of breadth with max. size 50kb) and signature on white paper in black ball point pen (having 2.5 cms of length X 7.5 cms of breadth with max. size 25kb) in .jpg format and upload the same, while submitting the Online application.

14. The applicants shall not upload any other original or attested copies of the documents / certificates (except the above specified documents) at the stage of submitting the online application.

15. While applying online application for the post, the applicants shall ensure that he/she fulfils the eligibility and other norms as mentioned above and that all the particulars furnished by him/her are correct in all respects. In case it is detected at any stage of recruitment that a applicant does not fulfill the eligibility norms and/or that he/she has suppressed/twisted or truncated any material facts, his/her candidature will stand cancelled. If any of these shortcomings is detected even after appointment, his/her appointment shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution.

14/5/2019

**(T.G.SHIVASHANKARE GOWDA),**
**REGISTRAR GENERAL I/C**
**HIGH COURT OF KARNATAKA**
**BENGALURU – 560001.**

## ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು (ವಾಹನ ಚಾಲಕರು)

1. ಅಭ್ಯರ್ಥಿಗಳು, ಅರ್ಜಿ ಸಲ್ಲಿಸುವುದರಲ್ಲಿ ಆಗಬಹುದಾದ ತಪ್ಪುಗಳನ್ನು ತಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ಈ ಮುಂದೆ ಹೇಳಿರುವ ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು.

2. ಅರ್ಜಿಯಲ್ಲಿ ಸಂಪರ್ಕದ ಉದ್ದೇಶಕ್ಕೆ ಸಂಬಂಧಿಸಿದಂತೆ ಕೊಟ್ಟಿರುವ ಸೂಕ್ತ ಕಾಲಂಗಳನ್ನು ತುಂಬುವಾಗ ಸಂವಹನಕ್ಕಾಗಿ ಮೊಬೈಲ್ ಸಂಖ್ಯೆ: ಮತ್ತು ಇ-ಮೇಲ್ ಐ.ಡಿ. (ಕಡ್ಡಾಯ) ಅದನ್ನು ಸರಿಯಾಗಿ ನಮೂದಿಸತಕ್ಕದ್ದು. ಸರಿಯಾದ ಮಾಹಿತಿ ಒದಗಿಸದೆ ಎಸ್.ಎಂ.ಎಸ್. ಅಥವಾ ಇ-ಮೇಲ್ ಸಂದೇಶ ಬರದಿದ್ದಲ್ಲಿ ಪ್ರಾಧಿಕಾರ ಹೊಣೆಯಾಗುವುದಿಲ್ಲ.

3. ಕೊನೆ ಕ್ಷಣದಲ್ಲಿ, ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡವನ್ನು ತಪ್ಪಿಸಲು, ಅಭ್ಯರ್ಥಿಗಳು ಸಾಕಷ್ಟು ಮುಂಚಿತವಾಗಿಯೇ ಅರ್ಜಿ ಸಲ್ಲಿಸುವುದು ಸೂಕ್ತ ವೆಬ್‌ಸೈಟ್ http://karnatakajudiciary.kar.nic.in/recruitment.asp **13ನೇ ಜೂನ್ 2019** ವರೆಗೆ ರಾತ್ರಿ 11.59 ಗಂಟೆಯೊಳಗೆ ಸಲ್ಲಿಸಿದ ಅರ್ಜಿಗಳನ್ನಷ್ಟೇ ಅಂಗೀಕರಿಸುತ್ತದೆ.

4. ಅಭ್ಯರ್ಥಿಯ ಚಾಲನಾ ಕೌಶಲ್ಯ ಪರೀಕ್ಷೆ ಅಥವಾ ಅನ್ಯಥಾ ಮೌಖಿಕ ಪರೀಕ್ಷೆಯ ಅರ್ಹತೆಗೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಧಾರವೇ ಅಂತಿಮವಾಗಿರುತ್ತದೆ.

5. ಚಾಲನಾ ಕೌಶಲ್ಯ ಪರೀಕ್ಷೆ / ಮೌಖಿಕ ಪರೀಕ್ಷೆಗಾಗಿ ಅಂಗೀಕರಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ http://karnatakajudiciary.kar.nic.in/recruitment.asp ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

6. ಅರ್ಹ ಅಭ್ಯರ್ಥಿಗಳ ಮೊಬೈಲ್‌ಗೆ ಸಂದೇಶವನ್ನು ಕಳುಹಿಸುವ ಮೂಲಕ ಹಾಗೂ ಇ-ಮೇಲ್ ಮೂಲಕ ಮಾಹಿತಿಯನ್ನು ನೀಡಲಾಗುವುದು. "ಕರೆ ಪತ್ರ" ಅನ್ನು ಡೌನ್ ಲೋಡ್ ಮಾಡಿಕೊಳ್ಳುವುದಕ್ಕಾಗಿ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು www.karnatakajudiciary.kar.nic.in/recruitment.asp ಎಂಬ ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿಯೂ ಸಹ ಅಧಿಸೂಚಿಸಲಾಗುವುದು. ಚಾಲನಾ ಕೌಶಲ್ಯ ಪರೀಕ್ಷೆ / ಮೌಖಿಕ ಪರೀಕ್ಷೆಗಾಗಿ ಪರೀಕ್ಷೆಗಳ ಸಮಯದಲ್ಲಿ ಆತನ/ಆಕೆಯ "ಕರೆ ಪತ್ರ"ವನ್ನು ತರತಕ್ಕದ್ದು.

7. ಅಭ್ಯರ್ಥಿಯು, ಚಾಲನಾ ಕೌಶಲ್ಯ ಪರೀಕ್ಷೆ/ಮೌಖಿಕ ಪರೀಕ್ಷೆಗೆ ಅರ್ಹನಾಗಿದ್ದ ಪಕ್ಷದಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯವು ನಿರ್ಧರಿಸಿದ ಮತ್ತು ಅಧಿಸೂಚಿಸಿದ ಸ್ಥಳ ಮತ್ತು ಸಮಯಕ್ಕೆ ಸರಿಯಾಗಿ ಅವರು ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

8. ಅಭ್ಯರ್ಥಿಯು, ಚಾಲನಾ ಕೌಶಲ್ಯ ಪರೀಕ್ಷೆ/ಮೌಖಿಕ ಪರೀಕ್ಷೆಗೆ ಹಾಜರಾಗುವಾಗ, ಪರಿಶೀಲನೆಗಾಗಿ "ಕರೆ ಪತ್ರ" ಚಾಲನಾ ಪರವಾನಿಗೆಯ ಪ್ರತಿಗಳನ್ನು ಗುರುತಿನ ರುಜುವಾತಾಗಿ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪ್ಯಾನ್ ಕಾರ್ಡ್ ಅಥವಾ ಪಡಿತರ ಚೀಟಿ ಅಥವಾ ಪಾಸ್‌ಪೋರ್ಟ್ ಇವುಗಳ ಮೂಲ ಪ್ರತಿಗಳೊಂದಿಗೆ ಪ್ರತಿಗಳನ್ನು ಸಲ್ಲಿಸತಕ್ಕದ್ದು.

9. ಅಭ್ಯರ್ಥಿಯು, ಚಾಲನಾ ಕೌಶಲ್ಯ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಗೆ ಹಾಜರಾಗುವಾಗ, ಪರಿಶೀಲನೆಗಾಗಿ ಎಸ್.ಎಸ್.ಎಲ್.ಸಿ / ತತ್ಸಮಾನ ಪರೀಕ್ಷೆಯ ಅಂಕಪಟ್ಟಿ, ಚಾಲನಾ ಪರವಾನಗಿ ಜಾತಿ ಪ್ರಮಾಣ ಪತ್ರಗಳು, ಯಾವುದೇ ಮೀಸಲಾತಿಯನ್ನು ಕೋರುವುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳು, 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು ಮತ್ತು (ಒಂದು ನಡತೆ ಪ್ರಮಾಣ ಪತ್ರವನ್ನು ಅಂತಿಮವಾಗಿ ವ್ಯಾಸಂಗ ಮಾಡಿದ ಶಿಕ್ಷಣ ಸಂಸ್ಥೆಯಿಂದಲೂ, ಇನ್ನೆರಡು ನಡತೆ ಪ್ರಮಾಣ ಪತ್ರಗಳನ್ನು ಗೌರವಾನ್ವಿತ ವ್ಯಕ್ತಿಗಳಿಂದಲೂ ಪಡೆದು) ಮೂರು ನಡತೆ ಪ್ರಮಾಣ ಪತ್ರಗಳನ್ನು – ಈ ಎಲ್ಲವುಗಳ ಸ್ವಯಂ ದೃಢೀಕೃತ ನಕಲು ಪ್ರತಿಗಳ ಒಂದು ಸೆಟ್‌ನ ಜೊತೆ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.

10. ಅರ್ಹ ಅಭ್ಯರ್ಥಿಗಳು ಚಾಲನಾ ಕೌಶಲ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮೌಖಿಕ ಪರೀಕ್ಷೆಗೆ ಆಯ್ಕೆ ಮಾಡಲಾಗುವುದು.

11. ಚಾಲನಾ ಕೌಶಲ್ಯ ಪರೀಕ್ಷೆ ಹಾಗೂ / ಅಥವಾ ಮೌಖಿಕ ಪರೀಕ್ಷೆಯಲ್ಲಿ ಯಶಸ್ವಿಯಾದ ಮಾತ್ರದಿಂದಲೇ ನೇಮಕಾತಿಯ ಯಾವುದೇ ಹಕ್ಕು ಖಾತ್ರಿಯಾಗತಕ್ಕದ್ದಲ್ಲ ಹಾಗೂ ಆ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಅಗತ್ಯವೆಂದು ಪರಿಗಣಿಸಬಹುದಾದಂಥ ಪರಿಶೀಲನೆಗಳನ್ನು ಮಾಡಿದ ನಂತರ ಅಭ್ಯರ್ಥಿಯು ಎಲ್ಲಾ ಆಯಾಮಗಳಲ್ಲೂ ಅರ್ಹನಾಗಿದ್ದೇನೆ/ಳಾಗಿದ್ದಾಳೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದ ಹೊರತು ಅಭ್ಯರ್ಥಿಯನ್ನು ಆ ಹುದ್ದೆಗೆ ನೇಮಕ ಮಾಡತಕ್ಕದ್ದಲ್ಲ.

12. ಅಭ್ಯರ್ಥಿಯು ಕರ್ನಾಟಕ ಉಚ್ಚ ನ್ಯಾಯಾಲಯವು ಅಧಿಸೂಚಿಸಬಹುದಾದಂಥ ಆನ್‌ಲೈನ್ ಬ್ಯಾಂಕಿಂಗ್ ವಿಧಾನದ ಮೂಲಕವಾಗಲಿ ಅಥವಾ ಚಲನ್ ನಮೂನೆ ಮೂಲಕವಾಗಲಿ ಅಧಿಸೂಚನೆಯಲ್ಲಿ ಸೂಚಿಸಬಹುದಾದಂಥ ಯುಕ್ತ ಅರ್ಜಿ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

ಶುಲ್ಕವನ್ನು, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್.ಬಿ.ಐ.) ಯಾವುದೇ ಶಾಖೆಯಲ್ಲಿ ಪಾವತಿ ಮಾಡತಕ್ಕದ್ದು.

13. ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಯು, (ಗರಿಷ್ಠ 50 ಕೆ.ಬಿ. ಅಳತೆಯಿರುವ 5 ಸೆಂ.ಮೀ. ಉದ್ದ 3.6 ಸೆಂ.ಮೀ. ಅಗಲವಿರುವ) ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಿಳಿಯ ಹಿನ್ನೆಲೆಯುಳ್ಳ ಭಾವಚಿತ್ರವನ್ನು ಸ್ಕ್ಯಾನ್ ಮಾಡತಕ್ಕದ್ದು ಹಾಗೂ JPG ನಮೂನೆಯಲ್ಲಿ, ಬಿಳಿ ಕಾಗದದ ಮೇಲೆ ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ (2.5 ಸೆಂ.ಮೀ. ಉದ್ದ 7.5 ಸೆಂ.ಮೀ ಅಗಲವಿರುವ ಗರಿಷ್ಠ 25 ಕೆ.ಬಿ. ಪ್ರಮಾಣವಿರುವಂತೆ) ತನ್ನ ಸಹಿ ಮಾಡಿ ಸ್ಕ್ಯಾನ್ ಮಾಡತಕ್ಕದ್ದು ಹಾಗೂ ಅದನ್ನು ಅಪ್‌ಲೋಡ್ ಮಾಡತಕ್ಕದ್ದು.

14. ಅಭ್ಯರ್ಥಿಯು, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ (ಮೇಲೆ ನಿರ್ದಿಷ್ಟಪಡಿಸಿದ ದಾಖಲೆಗಳನ್ನು ಹೊರತುಪಡಿಸಿ) ಬೇರೆ ಯಾವುದೇ ಇತರ ಮೂಲ ದಾಖಲೆಗಳು/ ಪ್ರಮಾಣ ಪತ್ರಗಳ ಅಥವಾ ಪ್ರಮಾಣೀಕೃತ ಪ್ರತಿಗಳನ್ನು ಅಪ್‌ಲೋಡ್ ಮಾಡತಕ್ಕದ್ದಲ್ಲ.

15. ಆ ಹುದ್ದೆಗೆ, ಸಂಬಂಧಿಸಿದಂತೆ, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು, ಮೇಲೆ ಸೂಚಿಸಲಾದಂಥ ತನ್ನ ವಿದ್ಯಾರ್ಹತೆ ಹಾಗೂ ಇತರ ಮಾನದಂಡಗಳನ್ನು ಪೂರ್ಣಗೊಳಿಸಲಾಗಿದೆಯೆಂದು ಹಾಗೂ ತಾನು ಒದಗಿಸಿರುವ ಎಲ್ಲಾ ವಿವರಗಳನ್ನು ಎಲ್ಲಾ ಆಯಾಮಗಳಲ್ಲೂ ಸರಿಯಾಗಿವೆಯೆಂದು ಖಚಿತಪಡಿಸತಕ್ಕದ್ದು. ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ವಿದ್ಯಾರ್ಹತೆಯ ಮಾನದಂಡಗಳನ್ನು ಪೂರ್ಣಗೊಳಿಸಿಲ್ಲವೆಂದು ಹಾಗೂ / ಅಥವಾ ಆತನ/ಆಕೆ ಯಾವುದೇ ಪ್ರಮುಖ ವಾಸ್ತವಾಂಶಗಳನ್ನು ಮರೆಮಾಚಿರುತ್ತಾನೆ/ಳೆ, ತಿರುಚಿರುತ್ತಾನೆ/ಳೆ, ಮೊಟಕುಗೊಳಿಸಿರುತ್ತಾನೆ/ಳೆಂದು ಕಂಡು ಬಂದ ಸಂದರ್ಭದಲ್ಲಿ ಆತನ/ಆಕೆಯ ಅಭ್ಯರ್ಥಿಕೆಯನ್ನು ರದ್ದುಗೊಳಿಸಲಾಗುವುದು. ಈ ಯಾವುದೇ ನ್ಯೂನತೆಗಳು ನೇಮಕಾತಿಯ ನಂತರ ಕಂಡುಬಂದರೂ, ಸಹ, ಅಭ್ಯರ್ಥಿಯ ಸೇವಾ ನೇಮಕಾತಿ ವಜಾಗೊಳ್ಳಲು ಬದ್ಧವಾಗಿರುತ್ತದೆ. ತಪ್ಪಾದ, ಅಪೂರ್ಣವಾದ ಅಥವಾ ಸರಿಯಲ್ಲದ ಮಾಹಿತಿಯನ್ನು ಒದಗಿಸುವುದು ಅನರ್ಹತೆಗೆ ಕಾರಣವಾಗುವುದು ಮಾತ್ರವಷ್ಟೇ ಅಲ್ಲದೆ, ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೂ ಸಹ ಅವಕಾಶ ಮಾಡಿಕೊಡುತ್ತದೆ.

6/5/2019

(ಟಿ.ಜಿ. ಶಿವಶಂಕರೇ ಗೌಡ)
ಮಹಾ ವಿಲೇಖನಾಧಿಕಾರಿ (ಪ್ರಭಾರ)
ಕರ್ನಾಟಕ ಉಚ್ಚ ನ್ಯಾಯಾಲಯ
ಬೆಂಗಳೂರು – 560 001.